

ಚಿತ್ರ: ಗೋವಿಂದರಾಜ್ ಜವಳಿ

# ಮಳೆಗಾಲಕ್ಕೊಂದು ಮುನ್ನುಡಿ

ನಾಲ್ಕಾರು ಮೈಲಿಯ ದೂರದ ಶಾಲೆಗೆ ಹೆಚ್ಚಾಗಿ ನಡದೇ ಹೋಗಬೇಕಾಗಿತ್ತು. ಬಸ್ಸು ದಾರಿಯಲ್ಲಿ ಹೋದರೆ ಸುತ್ತೆಂದು ಒಳದಾರಿ ಅಥವಾ ಯಾರದ್ದೋ ತೋಟ, ಗದ್ದೆ, ಬೇಣ, ಬೆಟ್ಟಗಳ ಮೇಲೆ ಸಮೀಪದ ದಾರಿಯನ್ನು ಹುಡುಕಿ ಸಾಗುತ್ತಿತ್ತು ನಮ್ಮಗಳ ಮೆರವಣಿಗೆ.

■ ಚಂದ್ರಶೇಖರ ಹೊಡಬಟ್ಟೆ

ಮತ್ತೊಂದು ಬೇಸಿಗೆ ಕಳೆದು ಅಂಬೆಗಾಲಿಕ್ಕುತ್ತಿರುವ ಮಳೆಗಾಲಕ್ಕೆ ಒಂದು ಪ್ರೀತಿ ಪೂರ್ವಕ ಸ್ವಾಗತ. ಅಂತೆಯೇ ಮಳೆಯ ಜೊತೆಗೇ ಪೈಪೋಟಿಯೆಂಬಂತೆ ಶರವೇಗದಲ್ಲಿ ಧಾವಿಸಿ ಬರುವ ನೆನಪಿಗೂ ಕೂಡಾ.

ಹುಟ್ಟಿ ಬೆಳೆದು ಬಾಲ್ಯವನ್ನು ಕಳೆದ ಮಲೆನಾಡಿನ ಆ ಪುಟ್ಟ ಹಳ್ಳಿಯ ನೆನಪು ಆಗಷ್ಟೇ ಬಿದ್ದ ಮಳೆಯಿಂದ ನೆನೆದ ಹಸಿರು ಹುಲ್ಲಿನ ಹಾಗೆ ಸುಂದರ ಹಾಗೂ ಶುಭ್ರ. ಕಡು ಬೇಸಿಗೆ ಮುಗಿದು ಮಳೆಗಾಲ ಬಂತೆಂದರೆ ಅದು ಬೇಸಾಯಕ್ಕೆ ಮತ್ತು ಶಾಲಾ ಕಾಲೇಜುಗಳ ಪ್ರಾರಂಭಕ್ಕೊಂದು ಮುನ್ನುಡಿ. ಮನೆಯ ಹಿರಿಯರಿಗೆ ತೋಟ ಗದ್ದೆಯ ಕೆಲಸಕ್ಕೆ ಕೆಲಸಗಾರರನ್ನು ಹುಡುಕಿ, ಎತ್ತಿನ ಗಳೇವನ್ನು ಹೊಂದಿಸಿ, ಅಗೆ ಬಿತ್ತಿ, ಭತ್ತದ ಗದ್ದೆಯನ್ನು ನಾಟಿ ಮಾಡುವ ತಲೆ ಬಿಸಿಯಾದರೆ ನಮಗೆ ಮಕ್ಕಳಿಗೆ ಹೊಸ ತರಗತಿ, ಹೊಸ ಮೇಷ್ಟರು, ಹೊಸ ವಾತಾವರಣದ ಬಗ್ಗೆ ಭಯ, ಆತಂಕ, ಕುತೂಹಲ.

ಈ ಮಧ್ಯೆ ಮುಂದಿನ ತರಗತಿಗೆ ಹೋದ ಮಕ್ಕಳಿಂದ ಸೆಕೆಂಡ್ ಹ್ಯಾಂಡ್ ಪುಸ್ತಕವನ್ನು ಅರ್ಧ ಬೆಲೆಗೆ ಖರೀದಿಸಿ, ಅದು ಹರಿದಿದ್ದರೆ ಅಲ್ಲಲ್ಲಿ ಹೊಲಿದು, ಅದಕ್ಕೊಂದು ಬೈಂಡು ಹಾಕಿ ಶಾಲೆಯ ಪಾಟೀಚೀಲಕ್ಕೆ ಸೇರಿಸಿದಾಗಲೇ ನಮಗೊಂದು ನೆಮ್ಮದಿ. ಅಷ್ಟೇ ಅಲ್ಲ, ಹರಿದ ಕೊಡೆ ಅಥವಾ ಮಳೆ ಅಂಗಿಗೂ ಅದೇ ಸಂಸ್ಕಾರ.

ಈಗಿನ ಹಾಗೆ ಊರಿಗೊಂದು ಶಾಲೆ, ಕರಿಹಲಗೆ ಬಿಳಿ ಹಲಗೆ ಯೋಜನೆ ಎಂದಿರಲಿಲ್ಲ. ನಾಲ್ಕಾರು ಮೈಲಿಗಳ ಆರೆಂಟು ಹಳ್ಳಿಗಳ ಮಕ್ಕಳಿಗೆ ಅನೂಕೂಲವಾಗುವಂತೆ ಸೇರಿ ಒಂದು ಕೇಂದ್ರೀಕೃತ ಸರ್ಕಾರಿ ಶಾಲೆ. ಮುಖ್ಯ ರಸ್ತೆಗೆ ದೂರದಲ್ಲಿ, ದಟ್ಟ ಕಾನನದ ಮಧ್ಯದಲ್ಲಿ ಬ್ರಿಟಿಷರ ಕಾಲದಲ್ಲಿ ಕಟ್ಟಿದ ಮಂಗಳೂರು ಹೆಂಚಿನ ಪುರಾತನ ಪಳೆಯುಳಿಕೆಗಳು. ಹೆಚ್ಚಾಗಿ ಮೂರ್ನಾಲ್ಕು ತರಗತಿಗಳಿಂದ ಒಂದು ಅಥವಾ ಎರಡು ಕೊಠಡಿಗಳು. ಅದರಲ್ಲೇ ಪಾಠ.

ಶಾಲೆಗೆ ಹೋಗುವ ನಮ್ಮ ಉತ್ಸಾಹವಾದರೂ ಎಂತಹುದು! ನಾಲ್ಕಾರು ಮೈಲಿಯ ದೂರದ ಶಾಲೆಗೆ ಹೆಚ್ಚಾಗಿ ನಡದೇ ಹೋಗಬೇಕಾಗಿತ್ತು. ಬಸ್ಸು ದಾರಿಯಲ್ಲಿ ಹೋದರೆ ಸುತ್ತೆಂದು ಒಳದಾರಿ ಅಥವಾ ಯಾರದ್ದೋ ತೋಟ ಗದ್ದೆ ಬೇಣ ಬೆಟ್ಟಗಳ ಮೇಲೆ ಸಮೀಪದ ದಾರಿಯನ್ನು ಹುಡುಕಿ ಸಾಗುತ್ತಿತ್ತು ನಮ್ಮಗಳ ಮೆರವಣಿಗೆ. ಒಂದು ಕೈಯಲ್ಲಿ ಪಾಟೀಚೀಲ, ಮತ್ತೊಂದರಲ್ಲಿ ಮಧ್ಯಾನ್ಹದ ಊಟದ ಉಗ್ಗ. ಇವಕ್ಕೆ ಸಂಗಾತಿಯಾಗಿ ಕೊಡೆ. ಹಳ್ಳಿಯ ಕಾಲುದಾರಿಗಳು. ಜಿಟಿಜಿಟಿ ಮಳೆಯ ಪಾಚಿಯಿಂದ ಇಡೀ ಕಾಲುದಾರಿಯೇ ಜಾರುಬಂಡಿ. ಆಳ ತಿಳಿಯದಷ್ಟು ನೀರು ತುಂಬಿಕೊಂಡಿರುವ ಗುದ್ದು ಗುಂಡಿಗಳು. ಅದರಲ್ಲಿಯೇ ಸರ್ಕಸ್ ಮಾಡುತ್ತ, ಕೆಲವೊಮ್ಮೆ ಕಾಲುದಾರಿಯಲ್ಲಿ ಸ್ವಾಭಾವಿಕವಾಗಿ ಜಾರುತ್ತ, ಮತ್ತೆ ಕೆಲವೊಮ್ಮೆ ಸಹಪಾಠಿಗಳ ಜೊತೆ ಕುಸ್ತಿ ಮಾಡಿ ಏಳುತ್ತ